**ಇಂದು ದಿನಾಂಕ:*12.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.KAM ವಕೀಲರಿಂದಃ**

ವಾದಿ ಯಾಕೆ ಕೇಸು ಹಾಕಿದ್ದಾರೆ ಎಂಬುದು ಗೊತ್ತು. ವಾದ ಪತ್ರದ ಪ್ರಕಾರ ಈ ಕೇಸು ಹಾಕುವ ಕಾಲಕ್ಕೆ ಅಕ್ಕಯ್ಯಮ್ಮನವರಿಗೆ 85 ವರ್ಷ ಆಗಿತ್ತು ಎಂದರೆ ಸರಿಯಲ್ಲ 70 ಆಗಿತ್ತು. ಅಕ್ಕಯ್ಯಮ್ಮನವರಿಗೆ 4 ಜನ ಮಕ್ಕಳು. ರಾಜೇಗೌಡ, ಸುಜಾತ, ಅಶೋಕ ಮತ್ತು ಸುನಂದ. ಅಕ್ಕಯ್ಯಮ್ಮ ಓದಿರಲಿಲ್ಲ ಎಂದರೆ ಸರಿ ಆದರೆ ಎಲ್ಲಾ ತಿಳುವಳಿಕೆ ಇತ್ತು. ದಾವಾ ಆಸ್ತಿ ಅಡಗೂರು ಗ್ರಾಮಕ್ಕೆ ಸೇರಿದೆ. ದಾವಾ ಆಸ್ತಿ ಅಕ್ಕಯ್ಯಮ್ಮರವರಿಗೆ ಅವರ ತಾಯಿ ಮನೆ ಆಸ್ತಿ ಆಗಿತ್ತು. ದಾವಾ ಆಸ್ತಿ ಆರ್.ಟಿ.ಸಿ.ಗಳಲ್ಲಿ ಅಕ್ಕಯ್ಯಮ್ಮ ಹೆಸರಿನ ಜೊತೆ ಬೇರೆಯವರ ಹೆಸರುಗಳು ನಮೂದಾಗಿವೆ ಎಂದರೆ ಸರಿಯಲ್ಲ. ಅಕ್ಕಯ್ಯಮ್ಮರವರಿಗೆ ಗೊತ್ತಿಲ್ಲದ ಹಾಗೆ ಸುಳ್ಳು ಮಾಹಿತಿ ನೀಡಿ ಅವರಿಂದ ಹಕ್ಕು ಖುಲಾಸೆ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ಅಕ್ಕಯ್ಯಮ್ಮನವರಿಗೆ ಸಾಲಕ್ಕಾಗಿ ಜಾಮೀನು ನೀಡುವಂತೆ ಕರೆದುಕೊಂಡು ಹೋಗಿ ಹಕ್ಕು ಖುಲಾಸೆ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿ ಅಕ್ಕಯ್ಯಮ್ಮನವರಿಗೆ ಅವರ ತಂದೆ ಕಡೆಯಿಂದ ಬಂದಿದ್ದು ಸ್ವಯಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ. ಅಕ್ಕಯ್ಯಮ್ಮನವರಿಗೆ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅವರು ಬದುಕಿರುವವರೆಗೆ ಅವರ ಮಕ್ಕಳಿಗೆ ಹಕ್ಕು ಇರುವುದಿಲ್ಲ ಎಂದರೆ ಅಕ್ಕಯ್ಯಮ್ಮನವರೇ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ. ಅಕ್ಕಯ್ಯಮ್ಮನವರು ಬದುಕಿದ್ದಾಗ ನಮ್ಮ ಮನೆಯ ಜಮೀನಿಗೆ ಸಂಬಂಧಿಸಿದಂತೆ ಬ್ಯಾಂಕ್ ನಿಂದ ಸಾಲ ಪಡೆದುಕೊಳ್ಳಲು ಸಾಕ್ಷಿಯಾಗಿ ಸಹಿ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ಅಕ್ಕಯ್ಯಮ್ಮ ಸಾಯುವವರೆಗೂ ವಾದ ಪತ್ರದಲ್ಲಿ ತೋರಿಸಿದ ವಿಳಾಸದಲ್ಲಿ ವಾಸವಾಗಿದ್ದರು ಎಂದರೆ ನಮ್ಮ ಜೊತೆ ವಾಸವಿದ್ದರು. ಹಕ್ಕು ಖುಲಾಸೆ ಪತ್ರಕ್ಕೆ ಸಾಕ್ಷಿ ಹಾಕಿರುವವರ

ಬಗ್ಗೆ ತಿಳಿದುಕೊಂಡಿದ್ದೇನೆ ಅವರಿಗೆ ಎಷ್ಟು ವಯಸ್ಸಾಗಿತ್ತು ಎಂದು ಗೊತ್ತಿಲ್ಲ. 1 ನೇ ಸಾಕ್ಷಿಯಾದ ವೆಂಕಟೇಶ ಮತ್ತು ಪ್ರತಿವಾದಿ ಒಂದೇ ಊರಿನವರು ಎಂದರೆ ಸರಿಯಲ್ಲ ವೆಂಕಟೇಶ ಚಪ್ಪರದಳ್ಳಿಯವರು. ಹಕ್ಕು ಖುಲಾಸೆ ಪತ್ರಕ್ಕೆ ಸಾಕ್ಷಿ ಹಾಕಿರುವವರ ಪೂರ್ಣ ವಿಳಾಸ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ 1 ಎಕರೆ ಇವಾಗ ಅಂದಾಜು ಎಷ್ಟು ಬೆಲೆಯಾಗುತ್ತದೆ ಎಂದರೆ ಗೊತ್ತಿಲ್ಲ. ಮಾರುಕಟ್ಟೆ ಮೌಲ್ಯದ ಪ್ರಕಾರ ದಾವಾ ಆಸ್ತಿ 1 ಎಕರೆಗೆ ರೂ.3,00,000/- ಬೆಲೆ ಬಾಳುತ್ತದೆ ಎಂದರೆ ಗೊತ್ತಿಲ್ಲ. ಹಕ್ಕು ಖುಲಾಸೆ ಪತ್ರದಲ್ಲಿ ಸಾಕ್ಷಿ ಹಾಕಿರುವವರಿಗೂ ಮತ್ತು ಅಕ್ಕಯ್ಯಮ್ಮನವರಿಗೂ ಪರಿಚಯ ಇರುವುದಿಲ್ಲ ಎಂದರೆ ಸರಿ. ಅಕ್ಕಯ್ಯನಮ್ಮ ತನ್ನ 4 ಜನ ಮಕ್ಕಳ ಜೊತೆ ಅನ್ಯೋನ್ಯವಾಗಿದ್ದು ಅವರ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ, ಆದರೆ ಪ್ರತಿವಾದಿ ಜೊತೆ ವಾಸವಿದ್ದರು. ಅಕ್ಕಯ್ಯಮ್ಮ ಪ್ರತಿವಾದಿ ಜೊತೆ ವಾಸವಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ಕಯ್ಯಮ್ಮ ಸಾಯುವವರೆಗೂ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದರು. ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**